**<u>ಸಾಕ್ಷಿಯನ್ನು ದಿನಾಂಕಃ17.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಹೆಚ್ ಎಂ ವಕೀಲರಿಂದಃ</u>**

1.ಈ ದಾವೆಯನ್ನು 4 ಐಟಂ ಸ್ವತ್ತುಗಳಿಗೆ ಸಲ್ಲಿಸಿದ್ದೇನೆ. ಅವುಗಳಲ್ಲಿ 2 ಸುಂಕದಕಟ್ಟೆಯಲ್ಲಿ ಇವೆ. ಉಳಿದ 2 ಮಾಚೋಹಳ್ಳಿಯಲ್ಲಿ ಇವೆ. ಸುಂಕದ ಕಟ್ಟೆಯಲ್ಲಿರುವ ನಿವೇಶನಗಳನ್ನು ನನ್ನ ತಂದೆ ನಾನು ಚಿಕ್ಕವಳಾಗಿದ್ದಾಗಲೇ ಖರೀದಿಸಿದ್ದಾರೆ. ಮಾಚೋಹಳ್ಳಿಯಲ್ಲಿರುವ ಆಸ್ತಿಗಳನ್ನು ನನ್ನ ತಂದೆ ನಾನು ವಿವಾಹ ಆದ ನಂತರ ಖರೀದಿಸಿದ್ದಾರೆ. ನನ್ನ ಮದುವೆಯಾದ ಎಷ್ಟು ವರ್ಷಗಳ ನಂತರ ಅವುಗಳನ್ನು ಖರೀದಿಸಿದ್ದಾರೆ ಎಂದು ಹೇಳಲು ನನಗೆ ಮರೆತು ಹೋಗಿದೆ. ನಾನು 4 ಸೈಟ್ ಗಳನ್ನು ಬಿಟ್ಟು ಬೇರೆ ಆಸ್ತಿಗಳಿಗೆ ದಾವೆ ಸಲ್ಲಿಸಿಲ್ಲವಾ ಎಂದರೆ, ಊರಿನಲ್ಲಿ ಇರುವ ನಮ್ಮ ತಾತನ ಆಸ್ತಿಗೂ ಸಲ್ಲಿಸಿದ್ದೇನೆ. ನನ್ನ ತಾತನ ಆಸ್ತಿ ಒಂದು 36 ಗುಂಟೆ ಮತ್ತೊಂದು 7 ವರೆ ಗುಂಟೆ ಇರುತ್ತದೆ. ಸದರಿ ಆಸ್ತಿಗಳು ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನಿಗೆ ಸೇರಿದ್ದು, ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಭಾಗ ಆದ ನಂತರ ನನ್ನ ಚಿಕ್ಕಪ್ಪನಿಂದ ಆಸ್ತಿಯನ್ನು ಖರೀದಿಸಿದಾದರೆ ಎಂದರೆ ಸರಿ. ಅವರೆಡೂ ಆಸ್ತಿಗಳು ಖುಷ್ಕಿ ಜಮೀನುಗಳು ಎಂದರೆ ಸರಿ. ಆ ಎರಡೂ ಆಸ್ತಿಗಳನ್ನು ನನ್ನ ತಂದೆಯ ಸಹೋದರರರು ಈಗಲೂ ಅನುಭವಿಸುತ್ತಿದ್ದಾರೆ ಎಂದರೆ ಸರಿ.

2. ಸುಂಕದಕಟ್ಟೆಯಲ್ಲಿ ನನ್ನ ತಂದೆ ಖರೀದಿಸಿರುವ ನಿವೇಶನಗಳ ನಂಬರ್ ಹೇಳಲು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಪೈಕಿ ಅವುಗಳು ಯಾವ ಆಸ್ತಿಗಳು ಎಂದು ಹೇಳಲು ನನಗೆ ಗೊತ್ತಿಲ್ಲ. ಸಿರಿಗಂಧದ ಕಾವಲಿನಲ್ಲಿ ಒಂದು ನಿವೇಶನ, ಇನ್ನೊಂದು ನಿವೇಶನ ಕೊಟ್ಟಿಗೆ

ಪಾಳ್ಯದಲ್ಲಿ ಇದೆ ಎಂದು ಹೇಳಿದ್ದೇನೆ ಎಂದರೆ, ಎರಡೂ ನಿವೇಶನಗಳೂ ಸಿರಿಗಂಧದ ಕಾವಲಿನಲ್ಲಿ ಇವೆ. ಸಿರಿಗಂಧದ ಕಾವಲಿನಲ್ಲಿ ಇರುವ ನಿವೇಶನಗಳನ್ನು ನನ್ನ ತಂದೆ ಯಾರಿಗೆ ಕೊಟ್ಟಿದ್ದಾರೆ ಎಂದರೆ ಅವುಗಳನ್ನು ಮೋಸದಿಂದ ನನ್ನ ದೊಡ್ಡ ತಮ್ಮನ ಹೆಂಡತಿ ಮತ್ತು ಅವನ ಮಗ ಬರೆಸಿಕೊಂಡಿದ್ದಾರೆ. ಮಾಚೋಹಳ್ಳಿಯಲ್ಲಿರುವ ನಿವೇಶನಗಳನ್ನು ನನ್ನ ತಂದೆ ಯಾರಿಗೆ ಕೊಟ್ಟಿದ್ದಾರೆ ಎಂದರೆ ಅವುಗಳನ್ನು ಮೋಸದಿಂದ ನನ್ನ ಚಿಕ್ಕತಮ್ಮ ರವೀಂದ್ರ ಮತ್ತು ನನ್ನ ದೊಡ್ಡತಮ್ಮನ ಮಗ ಬರೆಸಿಕೊಂಡಿದ್ದಾರೆ. ನನ್ನ ದೊಡ್ಡತಮ್ಮ ವಿಜಯೇಂದ್ರನ ಹೆಂಡತಿಯ ಹೆಸರಿಗೆ ನನ್ನ ತಂದೆ ಏನು ದಾಖಲೆ ಬರೆದುಕೊಟ್ಟಿದ್ದಾರೆ ಎಂದರೆ ನನ್ನ ತಮ್ಮನ ಹೆಸರಿಗೆ ನೊಂದಾಯಿತ ದಾನ ಪತ್ರ ಬರೆಸಲಾಗಿತ್ತು, ಈಗ ಅದನ್ನು ಯಾರು ಬರೆಸಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಮ್ಮ ವಿಜಯೇಂದ್ರನ ಮಗ ನಿವೇಶನದ ನೊಂದಾಯಿತ ಖರೀದಿ ಪತ್ರವನ್ನು ಮಾಡಿಸಿಕೊಂಡಿದ್ದಾರೆ. ನನ್ನ ತಮ್ಮ ರವೀಂದ್ರನಿಗೆ ಮಾಚೋಹಳ್ಳಿಯಲ್ಲಿರುವ ನಿವೇಶನವನ್ನು ನನ್ನ ತಂದೆ ಕ್ರಯ ಬರೆದುಕೊಟ್ಟಿದ್ದಾರೆ. ಮಾಚೋಹಳ್ಳಿಯಲ್ಲಿ ಇರುವ ಮತ್ತೊಂದು ನಿವೇಶನವನ್ನು ವಿಜಯೇಂದ್ರನ ಮಗನಿಗೆ ಕ್ರಯ ಪತ್ರ ಮಾಡಿಸಿಕೊಂಡಿದ್ದಾರೆ.

3. ನನ್ನ ತಂದೆ ನನ್ನ ತಮ್ಮ ವಿಜಯೇಂದ್ರನಿಗೆ ದಾನ ಪತ್ರ ಬರೆದುಕೊಟ್ಟು ಎಷ್ಟು ವರ್ಷಗಳಾಗಿವೆ ಎಂದು ನನಗೆ ನೆನಪಿಲ್ಲ. ಅವರ ಮಗನಿಗೆ ಬರೆದುಕೊಟ್ಟ ದಾನ ಪತ್ರಗಳನ್ನು ಯಾವಾಗ ಬರೆದಕೊಡಲಾಗಿದೆ ಎಂದು ನನಗೆ ನೆನಪಿಲ್ಲ. ನನ್ನ ತಂದೆ ಯಾವ ಇಸವಿಯಲ್ಲಿ

ತೀರಿಕೊಂಡಿದ್ದಾರೆ ಎಂದು ಹೇಳಲು ನನಗೆ ನೆನಪಿಲ್ಲ. ಅವರು ಮೃತ ಪಟ್ಟು 7–8 ವರ್ಷಗಳಾಗಿವೆ. ನನ್ನ ತಂದೆ ದಾನ ಪತ್ರಗಳನ್ನು ಬರೆದುಕೊಟ್ಟ ನಂತರ 10–12 ವರ್ಷಗಳ ವರೆಗೆ ಬದುಕಿದ್ದರು. ನನ್ನ ತಂದೆ ವಿಜಯೇಂದ್ರನಿಗೆ ಬರೆದುಕೊಟ್ಟ ದಾನ ಪತ್ರ, ಅವರ ಮೊದಲನೇ ಮಗನಿಗೆ ಬರೆದುಕೊಟ್ಟ ಕ್ರಯ ಪತ್ರ ಮತ್ತು 2 ನೇ ಮಗನಿಗೆ ಬರೆದುಕೊಟ್ಟ ಕ್ರಯ ಪತ್ರಗಳ ಪ್ರಕಾರ ಅವರವರ ಹೆಸರಿಗೆ ಖಾತೆ ಆಗಿದ್ದ ವಿಷಯ ನನ್ನ ತಂದೆಗೆ ಗೊತ್ತಿತ್ತು ಎಂದರೆ ಸರಿಯಲ್ಲ.

4. ನನ್ನ ತಂದೆ ಖರೀದಿಸಿದ್ದ ಆಸ್ತಿಗಳಿಗೆ ಅವರು ನನಗೆ ವಿಲ್ ಮಾಡಿಕೊಟ್ಟಿದ್ದಾರೆ. ಅವರು ಯಾವ ವರ್ಷ ನನಗೆ ವಿಲ್ ಬರೆದುಕೊಟ್ಟಿದ್ದಾರೆ ಎಂದು ನನಗೆ ನೆನಪಿಲ್ಲ. ಅವರು ಮೃತ ಪಡುವ ಸುಮಾರು 2 ತಿಂಗಳ ಹಿಂದೆ ನನಗೆ ವಿಲ್ ಮಾಡಿಕೊಟ್ಟಿದ್ದರು. ಸದರಿ ವಿಲ್ ಅನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನಾ ಎಂದರೆ ಕೊಟ್ಟಿರಬಹುದು. ನನ್ನ ತಂದೆ ಬೆಂಗಳೂರಿನಲ್ಲಿ ಅವರು ಸಂಪಾದನೆ ಮಾಡಿದ ನಿವೇಶನ ಮತ್ತು ಮನೆಗಳಲ್ಲಿ ನನಗೆ ಯಾವುದೇ ಸ್ವತ್ತನ್ನು ಕೊಟ್ಟಿಲ್ಲ. ನನಗೆ ನನ್ನ ತಂದೆ ವಿಲ್ ಮಾಡಿದ ಒಟ್ಟು ಆಸ್ತಿ ಸುಮಾರು 1 ಮುಕ್ಕಾಲು ಎಕರೆ ಬರುತ್ತದೆ. ನನಗೆ ದಿಃ 07.12.2018 ರಂದು ನನ್ನ ತಂದೆ ಎಡವನಹಳ್ಳಿಯಲ್ಲಿ ಇರುವ ಜಮೀನುಗಳನ್ನು ದಾನ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ವಿಲ್ ಮಾಡಿಕೊಟ್ಟಿದ್ದಾರೆ. ನನಗೆ ವಿಲ್ ಮಾಡಿಕೊಟ್ಟಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿರುವೆ, ಆ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ

ಸರಿಯಲ್ಲ.

5. ವಿಜಯೇಂದ್ರ ರವರಿಗೆ ನನ್ನ ತಂದೆ ದಾನ ಪತ್ರ ಮಾಡಿಕೊಟ್ಟಾಗ ನನ್ನ ತಂದೆ ಆರೋಗ್ಯವಾಗಿದ್ದರು ಎಂದರೆ ಸರಿಯಲ್ಲ. ವಿಜಯೇಂದ್ರ ರವರ ಮಗ ಮತ್ತು ರಾಘವೇಂದ್ರರಿಗೆ ಕ್ರಯ ಪತ್ರಗಳನ್ನು ಮಾಡಿಕೊಟ್ಟಾಗ ನನ್ನ ತಂದೆ ಆರೋಗ್ಯವಾಗಿದ್ದರು ಎಂದರೆ ಸರಿಯಲ್ಲ. ಅವರಿಗೆ pancreas ಕಾಯಿಲೆ ಆಗಿತ್ತು. ಅವರಿಗೆ ಆ ಕಾಯಿಲೆ ಗುಣ ಆಗಲಿಲ್ಲ. ನನ್ನ ತಂದೆ ಮೃತ ಪಡುವ ಆರು ತಿಂಗಳ ಮುಂಚೆ ಹಾಸಿಗೆ ಹಿಡಿದಿದ್ದರು. ನನ್ನ ತಂದೆ ಚೆನ್ನಾಗಿದ್ದಾಗ ಅವರ ಚಿಕ್ಕ ಮನೆಯಲ್ಲಿ ಇದ್ದರು, ಅನಾರೋಗ್ಯ ಪೀಡಿತರಾದಾಗ ನಮ್ಮ ಮನೆಗೆ ಬಂದಿದ್ದರು. ಅವರು ಮೃತ ಪಡುವ 6-7 ತಿಂಗಳ ಮುಂಚೆ ನಮ್ಮ ಮನೆಗೆ ಬಂದಿದ್ದರು. ನನ್ನ ತಂದೆ ವಿಜಯೇಂದ್ರನಿಗೆ ದಾನ ಪತ್ರ ಬರೆದುಕೊಟ್ಟ ಎಷ್ಟು ವರ್ಷಗಳ ನಂತರ ಆ ವಿಷಯವನ್ನು ಅವರಿಗೆ ನಾನು ಹೇಳಿದ್ದೆ ಎಂದರೆ ಅವರು ಅನಾರೋಗ್ಯ ಪೀಡಿತರಾಗಿ ನಮ್ಮ ಮನೆಗೆ ಬಂದ ನಂತರ ಆ ವಿಷಯವನ್ನು ನನ್ನ ಬಳಿ ಹೇಳಿದ್ದರು. ಅದುವರೆವಿಗೂ ನನಗೆ ಆ ವಿಷಯ ಗೊತ್ತಿರಲಿಲ್ಲ. ನನ್ನ ತಂದೆ ತನ್ನ ಮಗ ಮತ್ತು ಮೊಮ್ಮಕ್ಕಳ ಮೇಲೆ ಮೋಸ ಮಾಡಿ ಬರೆಸಿಕೊಂಡಿದ್ದಾರೆ ಎಂಬ ಕಾನೂನುಕ್ರಯ ಜರುಗಿಸಿದ್ದರಾ ಎಂದರೆ, ಅವರಿಗೆ ಕ್ರಯಕ್ಕೈಗೊಳ್ಳಲು ಆಗುತ್ತಿರಲಿಲ್ಲ. ನನ್ನ ತಂದೆ ಆ ವಿಷಯವನ್ನು ನನಗೆ ಹೇಳಿದ ನಂತರ ನಾನು ಆ ಬಗ್ಗೆ ಕಾನೂನು ಕ್ರಮ ಜರುಗಿಸಿದ್ದೆನಾ ಎಂದರೆ 4 ಜನರನ್ನು ಕೂರಿಗೆ ಆ ಬಗ್ಗೆ ನನ್ನ ತಮ್ಮ ಮತ್ತು ಅವರ ಮಕ್ಕಳ ಬಳಿ ಏಕೆ ಮೋಸ

ಮಾಡಿರುವುದಾಗಿ ಕೇಳಿದ್ದೆನು, ಅದಕ್ಕೆ ಅವರು ನನಗೆ 1 ನಿವೇಶನವನ್ನು ಬರೆದುಕೊಡುವುದಾಗಿ ಹೇಳಿದ್ದರು. ಆ 4 ಜನ ರ ಪೈಕಿ ಇಬ್ಬರು ನನ್ನ ತಮ್ಮನ ಸ್ನೇಹಿತರು ಮತ್ತು ಒಬ್ಬರು ನಮ್ಮ ಚಿಕ್ಕಪ್ಪ. ನನ್ನ ತಮ್ಮನ ಸ್ನೇಹಿತರ ಪೈಕಿ ಒಬ್ಬರ ಹೆಸರು ಯಾಲಕ್ಕಿ ಮತ್ತೊಬ್ಬನ ಹೆಸರು ಗೊತ್ತಿಲ್ಲ. ನನ್ನ ಚಿಕ್ಕಪ್ಪ ಮತ್ತು ಯಾಲಕ್ಕಿ ಬದುಕಿದ್ದಾರೆ. ನನಗೆ ಮತ್ತು ಅವರಿಗೆ ದ್ವೇಷ ಇಲ್ಲ ಎಂದರೆ, ನನ್ನ ಚಿಕ್ಕಪ್ಪ ನನ್ನ ಬಳಿ ಇರುವುದಿಲ್ಲ. ನನ್ನ ತಾಯಿ ಬದುಕಿರುವ ವರೆಗೂ ನನ್ನ ಜೊತೆ ಚೆನ್ನಾಗಿದ್ದರು ಎಂದರೆ ಸರಿ . ನನ್ನ ತಂದೆ ನಮ್ಮ ಮನೆಯಲ್ಲಿ ಏನಾದರೂ ವ್ಯವಹಾರ ಮಾಡಿದರೆ ನನಗೂ ತಿಳಿಸುತ್ತಿದ್ದರು ಎಂದರೆ ಸರಿಯಲ್ಲ.

6. ನನಗೆ ಬೆಂಗಳೂರಿನ ಅಂದರಹಳ್ಳಿ ಪ್ರಕಾಶ ಮತ್ತು ಕುಟುಬರಹಳ್ಳಿಯ ಕೆ ಎನ್ ರಾಜೇಂದ್ರ ಗೊತ್ತು. ಅವರಿಗೆ ಮತ್ತು ನಮ್ಮ ಕುಟುಂಬದವರಿಗೆ ಚೆನ್ನಾಗಿ ಪರಿಚಯ. ಅವರ ಕುಟುಂಬದಲ್ಲಿ ವ್ಯವಹಾರಗಳು ನಡೆದರೆ ನಮಗೆ ತಿಳಿಸುತ್ತಿದ್ದರು ಎಂದರೆ ಸರಿಯಲ್ಲ. ದಿಃ 13.06.2016 ರಂದು ರವೀಂದ್ರರವರಿಗೆ ನನ್ನ ತಂದೆ ಒಂದು ನಿವೇಶನವನ್ನು ಮಾರಾಟ ಮಾಡಿದ ಸಂದರ್ಭದಲ್ಲಿ ನನ್ನ ತಂದೆ ಉಪನೊಂದಣಾಧಿಕಾರಿ ಕಛೇರಿಗೆ ಹೋಗಿ ಸಾಕ್ಷಿಯಾಗಿ ಸಹಿ ಹಾಕಿದ್ದಾರೆ ಎಂದರೆ ಅವರಿಗೆ ಗೊತ್ತಿಲ್ಲದಂತೆ ಹಾಕಿಸಿಕೊಂಡಿದ್ದಾರೆ. ನನ್ನ ತಂದೆ ತನ್ನನ್ನು ಉಪನೊಂದಣಾಧಿಕಾರಿ ಕಛೇರಿಗೆ ಕರೆದುಕೊಂಡು ಹೋಗಿ ಯಾವ ದಾಖಲೆಗೊ ಸಹಿ ಹಾಕಿಸಿಕೊಂಡಿರುವುದಾಗಿ ನನ್ನ ಬಳಿ ಹೇಳಿದ್ದರು.

7. ನನ್ನ ತಂದೆ ವಿಶ್ವಾಸ್ ರವರಿಗೆ ನಿವೇಶವನ್ನು ಮಾರಾಟ ಮಾಡಿದಾಗ ಯಾಲಕ್ಕಿಗೌಡ ಸಹಿ ಹಾಕಿದ್ದಾರೆ ಎಂದರೆ ಅವರಿಗೆ ಗೊತ್ತಿಲ್ಲದಂತೆ ಸಹಿ ಹಾಕಿಸಿಕೊಂಡಿರುವುದಾಗಿ ಅವರು ನನ್ನ ಬಳಿ ಹೇಳಿದ್ದಾರೆ. ವಿಶ್ವಾಸ್ ರವರಿಗೆ ನನ್ನ ತಂದೆ ಸುಂಕದಹಟ್ಟಿಯ ನಿವೇಶನ ಸಂಖ್ಯೆ 17 ಅನ್ನು 2017 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಆಗ ವಿಶ್ವಾಸ್ ಚಿಕ್ಕ ಹುಡುಗ ಆಗಿದ್ದ, ಅವನಿಗೆ ಖರೀದಿಸುವ ಸಾಮರ್ಥ್ಯ ಇರಲಿಲ್ಲ, ನನ್ನ ತಂದೆಗೆ ಮದ್ಯಪಾನ ಮಾಡಿಸಿ ಬರೆಸಿಕೊಡಿದ್ದಾರೆ. ಆಗ ವಿಶ್ವಾಸ್ ಗೆ 18 ವರ್ಷ ವಯಸ್ಸು ಆಗಿತ್ತು ಎಂದರೆ ನನಗೆ ಸರಿಯಾಗಿ ಗೊತ್ತಿಲ್ಲ. ವಿಶ್ವಾಸ್ ರವರ ತಂದೆ ವಿಜಯೇಂದ್ರ ರವರು spring factory ನಡೆಸುತಿದ್ದರು ಎಂದರು ಅವರು ಮೊದಲು ನಮ್ಮ ಬಳಿ ಕೆಲಸ ಮಾಡುತ್ತಿದ್ದರು, ನಂತರ ಅವರು ಫ್ಯಾಕ್ಟರಿ ನಡೆಸುತ್ತಿದ್ದರು. ಈಗಲೂ ಅವರು ಫ್ಯಾಕ್ಟರಿ ನಡೆಸುತ್ತಿದ್ದಾರೆ ಎಂದರೆ ಅವನು ಈಗ ಬದುಕಿಲ್ಲ. ಅವರ ಮಕ್ಕಳು ಫ್ಯಾಕ್ಟರಿ ನಡೆಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಿಜಯೇಂದ್ರ ಮೃತ ಪಟ್ಟ ನಂತರ spring factory ಅನ್ನು ಅವರ ಮಗ ವಿಶ್ವಾಸ ನಡೆಸುತ್ತಿದ್ದು ಆ ವಿಷಯ ನನಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ವಿಜಯೇಂದ್ರ ಯಾವಾಗ ಮೃತ ಪಟ್ಟಿದ್ದಾರೆ ಎಂದು ನನಗೆ ದಿನಾಂಕ ಹೇಳಲು ಗೊತ್ತಿಲ್ಲ. ನನ್ನ ತಂದೆ ಮೃತ ಪಟ್ಟ ಸುಮಾರು 1 ವರ್ಷದ ನಂತರ ವಿಜಯೇಂದ್ರ ಮೃತ ಪಟ್ಟಿದ್ದಾರೆ. ವಿಜಯೇಂದ್ರನಿಗೆ spring factory ನಲ್ಲಿ ಒಳ್ಳೆಯ ವರಮಾನ ಇತ್ತು ಎಂದರೆ ಸರಿಯಲ್ಲ. ವಿಶ್ವಾಸ್ ರವರಿಗೆ ನನ್ನ ತಂದೆ ಮಾರಾಟ ಮಾಡಿದ ನಿವೇಶನವನ್ನು ಮಾರಾಟ ಮಾಡಲು ನನ್ನ ತಂದೆಗೆ ಜಯಲಕ್ಷ್ಮೀ

ಕೋಂ ಚೌಡಪ್ಪ power of attorney ಕೊಟ್ಟಿದ್ದರು ಎಂದರೆ ನನ್ನ ತಂದೆ ಅವರಿಂದ ಖರೀದಿಸಿದ್ದರು. ನನ್ನ ತಂದೆ power of attorney ತೆಗೆದುಕೊಂಡು ನಿವೇಶನವನ್ನು ವಿಶ್ವಾಸ್ ರವರಿಗೆ ರೂ.14,56,400/- ಗಳಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ವಿಶ್ವಾಸ್ ಗೆ ಮೊದಲನೇ ಸಲ ನಿವೇಶನ ಮಾರಾಟ ಮಾಡಿದಾಗ ವಿಶ್ವಾಸ್ ಅಪ್ರಾಪ್ತ ವಯಸ್ಕನಾಗಿದ್ದ ಕಾರಣ ಅವನ ಪರವಾಗಿ ವಿಜಯೇಂದ್ರ ಖರೀದಿಸಿದ್ದರು ಎಂದರೆ ಸರಿಯಲ್ಲ. ಆ ನಿವೇಶನವನ್ನು ರೂ.13,20,000/- ಗಳಿಗೆ ಖರೀದಿ ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆ ರವೀಂದ್ರ ರವರಿಗೆ ನಿವೇಶನವನ್ನು ರೂ.15,17,000/- ಗಳಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

8. ವಾದ ಪತ್ರವನ್ನು ಬರೆಸಿ ಹಾಕಿದ ಸಮಯದಲ್ಲಿ ವಕೀಲರಿಗೆ ಮಾಹಿತಿಯನ್ನು ನಾನೇ ಕೊಟ್ಟಿದ್ದೇನೆ. ವಾದ ಪತ್ರದಲ್ಲಿ ನಾನು ನನ್ನ ತಂದೆಗೆ ಮಧ್ಯಪಾನ ಮಾಡಿಸಿ ಪತ್ರಗಳನ್ನು ಬರೆಸಿಕೊಂಡಿದ್ದಾರೆ ಎಂದು ಹೇಳಿದ್ದೇನಾ ಎಂದರೆ ಈಗ ಹೇಳುತ್ತಿದ್ದೇನೆ. ನನ್ನ ತಾಯಿ ಬೆಂಗಳೂರಿನಲ್ಲಿ corporation ನಲ್ಲಿ ಕೆಲಸದಲ್ಲಿ ಇದ್ದರು ಎಂದರೆ ಸರಿ. ನನ್ನ ತಾಯಿ ವಿದ್ಯಾವಂತೆ ಅಲ್ಲ ಎಂದರೇ ಸರಿಯಲ್ಲ. ನನ್ನ ತಂದೆ ರಿಯಲ್ ಎಸ್ಟೇಟ್ ಜೊತೆಗೆ ಆಡು-ಕುರಿ ವ್ಯಾಪರ ಮಾಡುತ್ತಿದ್ದರು ಎಂದರೆ ಸರಿ. ಅವರಿಗೆ ರಿಯಲ್ ಎಸ್ಟೇಟ್ ನಲ್ಲಿ ಸಾಕಷ್ಟು ವರಮಾನ ಇತ್ತು ಎಂದರೆ ಅಷ್ಟೇನೂ ಇರಲಿಲ್ಲ. ನನ್ನ ತಾಯಿಗೆ ಸಂಬಳ ಬರುತ್ತಿತ್ತು ಎಂದರೆ ಸರಿ. ನನ್ನ ತಾಯಿ ಮೃತ ಪಡುವ ಕಾಲಕ್ಕೆ ಅವರ ಬಳಿ ಅರ್ಧ ಕೆ ಜಿ ಚಿನ್ನ ಇತ್ತು ಎಂದರೆ

ಸರಿಯಲ್ಲ. ಅದನ್ನು ನಾನು ನನ್ನ ತಮ್ಮಂದಿರಿಗೆ ಕೊಡದೇ ನಾನೇ ಲಪಟಾಯಿಸಿದ್ದೇನೆ ಎಂದರೆ , ಅವರಿ ಬಳಿ ಒಂದು ಜೊತೆ ಓಲೆ ಇದ್ದವು, ಬೇರೆ ಯಾವುದೇ ಚಿನ್ನ ಇರಲಿಲ್ಲ. ಅವರು ಮೃತ ಪಡುವ ಕಾಲಕ್ಕೆ ಅವರ ಉಳಿತಾಯ ಖಾತೆಯಲ್ಲಿ ರೂ. 25 ಲಕ್ಷ ಹಣ ಇತ್ತು ಎಂದರೆ ಸರಿಯಲ್ಲ. ಆ ಪೂರ್ತಿ ಹಣವನ್ನು ನಾನೇ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಅವರ ಆಸ್ಪತ್ರೆಯ ಖರ್ಚನ್ನು ತಾನು ಮಾಡಿರುವುದಾಗಿ ನುಡಿದಿರುತ್ತಾರೆ. ನನ್ನ ತಂದೆ ಮತ್ತು ನನ್ನ ತಾಯಿ ನಮ್ಮ ಮನೆಯಲ್ಲಿ ಯಾವತ್ತೂ ಇರಲಿಲ್ಲ, ಅವರಿಗೆ ನಾನು ಆಸ್ಪತ್ರೆಗೆ ಖರ್ಚು ಮಾಡಿದ್ದೇನೆಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಐಟಂ ನಂಬರ್ 1 ಮತ್ತು 2 ರಲ್ಲಿ ಅರ್ಧ ಭಾಗ ಹಾಗೂ ಐಟಂ ನಂಬರ್ 3 ರಿಂದ 6 ರ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿ. ನನ್ನ ತಂದೆಗೆ ಅವುಗಳ ಮೇಲೆ ವ್ಯವಹರಿಸುವ ಸಂಪೂರ್ಣ ಅಧಿಕಾರ ಇತ್ತು ಎಂದರೆ ಸರಿ. ಅವರ ಸ್ವಂತ ಹಕ್ಕನ್ನು ಆಧರಿಸಿ 3 ಆಸ್ತಿಗಳನ್ನು ಮಾರಾಟ ಮಾಡಿದ್ದು ಒಂದು ಆಸ್ತಿಯನ್ನು ದಾನ ಕೊಟ್ಟಿದ್ದಾರೆ ಎಂದರೆ ಮೋಸ ಮಾಡಿ ಬರೆಸಿಕೊಳ್ಳಲಾಗಿದೆ. ನನಗೂ ಸಹ ಅತ್ಯಂತ ಬೆಲೆ ಬಾಳುವ 2 ಎಕರೆ ಆಸ್ತಿಯನ್ನು ದಾನ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ತನಗೆ ವಿಲ್ ಮುಖಾಂತರ ಆಸ್ತಿಕೊಟ್ಟಿರುವುದನ್ನು ಬಿಟ್ಟರೆ ಬೇರೆ ಆಸ್ತಿ ಕೊಟ್ಟಿಲ್ಲ ಎಂದುನುಡಿದಿರುತ್ತಾರೆ. ವಿಲ್ ಮೂಲಕ ನನಗ ಕೊಟ್ಟಿದ್ದಾರೆ ಎಂದು ಹೇಳು ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ನನ್ನ ತಂದೆ ಸ್ವಯಾರ್ಜಿತವಾಗಿ

ಸಂಪಾದಿಸಿದ ಆಸ್ತಿಯಲ್ಲಿ ಶೇಕಡಾ 60 ರಷ್ಟು ಆಸ್ತಿಯನ್ನು ನಾನು ಲಪಟಾಯಿಸಿದ್ದಲ್ಲದೇ ನನ್ನ ತಮ್ಮಂದಿರಿಗೆ ಕೊಟ್ಟಿರುವ ಆಸ್ತಿಯನ್ನು ಕಬಳಿಸಬೇಕೆಂದು ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಗಂಡನ ಹೆಸರಿನಲ್ಲಿ ಖರೀದಿಸಿರುವ ಆಸ್ತಿಗಳನ್ನು ಖರೀದಿ ಮಾಡಲು ನನ್ನ ತಂದೆ ಹಣ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನಗಾಗಲೀ ಮತ್ತ ನನ್ನ ಗಂಡನಿಗಾಗಲೀ ಸ್ವಂತ ಆಸ್ತಿ ಖರೀದಿಸುವ ಚೈತನ್ಯ ಇರಲಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.